ಪ್ರತಿಬಿಂಬ
PRATIBIMBA –Multidisciplinary Kannada Research Journal of IIMRD
ISSN: 2582-2284
Vol-5 Issue 2, September-October, 2023, Pp. 60-69.
©*IIMRD*, Mysuru
IIMRD JOURNALS
www.iimrd.com

# ಡಾ. ಚಂದ್ರಶೇಖರ ಕಂಬಾರ: ಸಾಹಿತ್ಯ ಅವಲೋಕನ

**ಡಾ. ಎಚ್. ಬಿ. ಕೋಲ್ಕಾರ***
*ಮುಖ್ಯಸ್ಥರು, ಕನ್ನಡ ವಿಭಾಗ, ಆರ್.ಪಿ.ಡಿ ಕಾಲೇಜು, ಬೆಳಗಾವಿ

**ಸಾರಾಂಶ: (Abstract)**

*ಕವಿ, ಕಾದಂಬರಿಕಾರ, ನಟ, ನಾಟಕಕಾರ, ಹಾಡುಗಾರ, ನಿರ್ದೇಶಕ, ಸಂಗೀತ ನಿರ್ದೇಶಕ, ಸಂಶೋಧಕ, ಸಂಪಾದಕ ಹೀಗೆ ಬಹುಮುಖ ಪ್ರತಿಭೆಯ ವ್ಯಕ್ತಿತ್ವ ಡಾ. ಚಂದ್ರಶೇಖರ ಕಂಬಾರ ಅವರದು. ಕಂಬಾರರ ಪ್ರತಿಭೆಯ ಆಳ ಅಗಲ, ಎತ್ತರ–ಬಿತ್ತರದ ಅಗಾಧ ಸ್ವರೂಪವನ್ನು ಅರವತ್ತಕ್ಕೂ ಮಿಕ್ಕಿದ ಅವರ ಕೃತಿಗಳಲ್ಲಿ ನಾವು ಆಲೋಚನೆ, ಚಿಂತನೆ, ಮನನ, ಧ್ಯಾನ, ಕನಸು, ಕಲ್ಪನೆಗಳ ರೂಪದಲ್ಲಿ ದರ್ಶಿಸಬಹುದಾಗಿದೆ, ಅನುಭವಿಸಬಹುದಾಗಿದೆ. ಇದಕ್ಕೆ ಋಣಿಯಾಗಿ ಎತ್ತರದ ಎಂಬ ಲೆಕ್ಕದಲ್ಲಿ ನಾವು 'ಜ್ಞಾನಪೀಠ' ದಂತಹ ಸಾಂಕೇತಿಕ ಪ್ರಶಸ್ತಿ, ಬಿರುದುಗಳನ್ನು ನೀಡಿ ಸಮಾಧಾನ ಪಡಬಹುದಷ್ಟೆ ಆದರೆ ಅದರಾಚೆಗೂ ಕಂಬಾರರ (ಕಂಬಾರರಂತಹ ಕವಿ ಪುಂಗವರ) ವ್ಯಕ್ತಿತ್ವದ ಹಿರಿಮೆ–ಗರಿಮೆಗಳು ವೈಚಾರಿಕವಾಗಿ, ಸಾಂಸ್ಕೃತಿಕವಾಗಿ ನಮ್ಮ ಭಾವ ಬದುಕನ್ನು ತುಂಬಿ ನಿಲ್ಲುತ್ತವೆ ಅವು ನಿಜಕ್ಕೂ ಸೂರ್ಯ ಸ್ವರೂಪದವು. ಪ್ರಸ್ತುತ ಲೇಖನವು ಅವರ ಜೀವನ ವಿವರವನ್ನು ಒಂದು ಆಯಾಮವಾಗಿ, ಅವರ ಸಾಹಿತ್ಯಕ ಸಾಧನೆಯನ್ನು ಇನ್ನೊಂದು ಆಯಾಮದಲ್ಲಿ ಸಂಕ್ಷಿಪ್ತವಾಗಿ ಪರಿಚಯಾತ್ಮಕ ಸ್ವರೂಪದಲ್ಲಿ ವಿವರಿಸುವ ಚೌಕಟ್ಟಿಗೆ ಸೀಮಿತವಾಗಿದೆ.*

**ಮುಖ್ಯಪದಗಳು(Keywords):** ಕನ್ನಡ ಸಾಹಿತ್ಯ, ಕಂಬಾರ, ಸಂಗ್ಯಾ–ಬಾಳ್ಯಾ, ಋಷ್ಯಶೃಂಗ, ಬಣ್ಣಿಸಿ ಹಾಡವ್ವ ನನ ಬಳಗ.

## ಪೀಠಿಕೆ

ಕನ್ನಡದ ನೆಲದಿಂದ ಕಂಬಾರರು ಅರಿವಿನ ಜಗತ್ತನ್ನು ಬೆಳಗುತ್ತಿರುವ ಮತ್ತೊಬ್ಬ ಸೂರ್ಯ, 'ಶಿಖರ ಸೂರ್ಯ'. ಆಧುನಿಕ ಕನ್ನಡದ ಸಾಹಿತ್ಯ ಸಂದರ್ಭವು ಬಹುದೊಡ್ಡ ಲೇಖಕರನ್ನು ಸಾರಸ್ವತ ಬದುಕಿಗೆ ಕೊಡುಗೆಯಾಗಿ ನೀಡಿತು. ಕುವೆಂಪು, ಬೇಂದ್ರೆ, ಮಾಸ್ತಿ, ಕಾರಂತ, ಗೋಕಾಕ, ಅಡಿಗ, ಅನಂತಮೂರ್ತಿ ಹೀಗೆ... ಅಂಥವರ ಔನ್ನತ್ಯದ ಸಾಧನೆಯ ಸಾಲಿನಲ್ಲಿ ಕಂಬಾರರೂ ಒಬ್ಬರೆಂಬುದು ನಮ್ಮೆಲ್ಲರ ಹೆಮ್ಮೆ. ತಂದೆ ಬಸವಣ್ಣೆಪ್ಪ, ತಾಯಿ ಚೆನ್ನಮ್ಮ, ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಘೋಡಗೇರಿಯಲ್ಲಿ ಕಂಬಾರಿಕೆ ವೃತ್ತಿಯ ಮನೆತನ. 1937 ಜನೇವರಿ 2 ಚಂದ್ರಶೇಖರರ ಜನನ, ಪ್ರಕೃತಿ ಸಹಜ ಸೌಂದರ್ಯದ ಘಟಪ್ರಭೆಯ ದಂಡೆಯ ಮೇಲೆ ಘೋಡಗೇರಿ, ಅಕ್ಕಪಕ್ಕ ಶಿವಾಪುರ, ಸಾವಳಗಿ, ಗೋಕಾಕ ಮೊದಲಾದ ಊರುಗಳು, ಕೆಲವರಿಂ ಓದಿಯುಂ...

*Please cite this article as: ಕೋಲ್ಕಾರ, ಎಚ್. ಬಿ.* (2023). ಡಾ. ಚಂದ್ರಶೇಖರ ಕಂಬಾರ: ಸಾಹಿತ್ಯ ಅವಲೋಕನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(2). ಪು.ಸಂ.* 60–69.

ಹಲಹಲವರಿಂ ಕುರಿತೋದದೆಯುಂ... ದೊಡ್ಡಾಟ, ಸಣ್ಣಾಟ (ವಿಶೇಷವಾಗಿ ಪಾರಿಜಾತ, ಸಂಗ್ಯಾ–ಬಾಳ್ಯಾ, ರಾಧಾನಾಟ), ಲಾವಣಿ, ಗೀಗಿ, ಸೋಬಾನೆ, ಸುಗ್ಗಿ, ಡೊಳ್ಳು, ಗೊಂದಲಿಗ್ಯಾ ಮೊದಲಾದ ಹಾಡುಗಳು, ಸಂಪ್ರದಾಯದ ಪದಗಳು ನಿರಂತರವಾಗಿ ಅನುರಣಿಸುತ್ತಿದ್ದ ಜಾನಪದ ಸಿರಿ ತುಂಬಿದ ಜನಪದರ ಕಲಾ ಪರಿಸರ, ಕಂಬಾರರ ತಂದೆ ಕಲಾರಸಿಕರು. ತಾಯಿ ಜನಪದ ಹಾಡುಗಳ ಖನಿ, ಸೋದರ ಮಾವ ರಾಮಪ್ಪ, ಧೂಪದಾಳದ ದೊಡ್ಡಮ್ಮರಿಂದ ಅಕ್ಕರತೆಯ ಸುರಿಮಳೆ ಕಂಬಾರರ ಮೇಲೆ ನಿರಂತರವಾಗಿತ್ತು. ಕಾರಣ ಕಂಬಾರರ ಬಾಲ್ಯವೆಲ್ಲ ಜನಪದರ ಸಹಜ ಜೀವನ ಶೈಲಿ, ಕಲಾರಸಿಕತೆ ಅವರ ಹಾಡು, ಕುಣಿತ, ಸಾಂದರ್ಭಿಕ ಹಬ್ಬ ಹರಿದಿನ, ಜಾತ್ರೆ, ಉತ್ಸವದ ಪರಿಸರದಲ್ಲಿ ಪರಿಪುಷ್ಟಿ ಹೊಂದಿದ್ದು,

ಕಂಬಾರರ ಬಾಲ್ಯ ಕನ್ನಡದ ರತ್ನ ರನ್ನನ ಬಾಲ್ಯವನ್ನು ನೆನಪಿಸುವ ಹಾಗಿದೆ. ರನ್ನ ತನ್ನ ಮನೆತನದ ವೃತ್ತಿ 'ಬಳೆಗಾರಿಕೆ'ಯನ್ನು ತಿರಸ್ಕರಿಸಿದ ಹಾಗೆಯೇ ಕಂಬಾರರು ತಮ್ಮ ಮನೆತನದ 'ಕಂಬಾರಿಕೆ' ವೃತ್ತಿಯನ್ನು ಬದಿಗೆ ತಳ್ಳಿ ಒತ್ತಾಯದಿಂದ ಅಕ್ಷರ ಕಲಿಕೆಗೆ ಹಂಬಲಿಸುತ್ತಾರೆ. ಪರಿಸರದ ಕಾರಣವಾಗಿ ಬಾಲ್ಯದಲ್ಲಿಯೇ ರಚನಾ ಸಾಮರ್ಥ್ಯ ಕಂಬಾರರಿಗೆ ಸಿದ್ಧಿಸುತ್ತ ಹೋಗುತ್ತದೆ. ವಿಶೇಷವಾಗಿ ಜಾನಪದ ಪರಂಪರೆಯ ಪಾರಿಜಾತ, ಲಾವಣಿ, ಗೀಗಿ, ಡೊಳ್ಳಿನ ಪದಗಳು, ಹಂತಿ ಪದಗಳು, ಸಂಗ್ಯಾ – ಬಾಳ್ಯಾ, ರಾಧಾನಾಟಕಗಳು ಅವರ ಮೇಲೆ ಪ್ರಭಾವ ಬೀರಿದ್ದಿದೆ. ಕ್ರಮೇಣ ಬಾಲ್ಯದಲ್ಲೇ ನಾಟಕಗಳಲ್ಲಿ ಪಾತ್ರಧಾರಿಗಳಾಗುತ್ತಾರೆ. ತಂದೆಗೆ ಆತಂಕವಾಗುವಷ್ಟು ಜನಪದ ಕಲಾ ಪರಂಪರೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಾರೆ. ಈ ಆಸಕ್ತಿ ಅವರಲ್ಲಿ ಇಂದಿಗೂ ಉಳಿದು ಬಂದಿರುವುದೂ ಅವರ ಜೀವನದ ವೈಶಿಷ್ಟ್ಯ. ಬಹುಶಃ ಕಾರಂತರ ಕಲಾ ಪ್ರೀತಿ ಮತ್ತು ಜೀವನ ಪ್ರೀತಿಯನ್ನು ಉತ್ತರ ಕರ್ನಾಟಕದಲ್ಲಿ ನಿರಂತರ ಉಳಿಸಿಕೊಂಡು, ಬೆಳೆಸಿಕೊಂಡು ಬಂದವರು ಕಂಬಾರರೇ ಎನ್ನುವುದನ್ನು ಮರೆಯುವ ಹಾಗಿಲ್ಲ.

ಕಂಬಾರರು ಗೋಕಾಕದ ಮುನ್ಸಿಪಲ್ ಹೈಸ್ಕೂಲ್‌ನಲ್ಲಿ ಕನ್ನಡದ ಶ್ರೇಷ್ಠ ಶಿಕ್ಷಕರೂ, ಜನಪ್ರಿಯ ಕಾದಂಬರಿಕಾರರೂ ಆದ ಕೃಷ್ಣಮೂರ್ತಿ ಪುರಾಣಿಕರ ಶಿಷ್ಯರಾಗಿ, ಸಾಮಾಜಿಕ ಸಾಮರಸ್ಯಕ್ಕೆ ಹೆಸರಾಗಿದ್ದ, ಹಂಬಲಿಸುವ ಮಕ್ಕಳಿಗೆ ಆಟದ, ಅಂಬಲಿಯ ಅಂಗಳವಾಗಿದ್ದ ಸಾವಳಗಿ ಮಠದ ಆಶ್ರಯದಲ್ಲಿ ನಿಂತು ಪ್ರೌಢ ಶಿಕ್ಷಣ ಪೂರೈಸಿ ಅದೇ ಸಾವಳಗಿ ಸ್ವಾಮಿಗಳ ನೆರವಿನಿಂದ ಬೆಳಗಾವಿಯ ನಾಗನೂರು ಸ್ವಾಮಿಗಳ ಮಠದಲ್ಲಿ ಆಶ್ರಯ ಪಡೆದು ಖ್ಯಾತ ವಿದ್ವಾಂಸ ಪ್ರೊ. ಎಸ್. ಎಸ್. ಭೂಸನೂರಮಠರ ಶಿಷ್ಯರಾಗಿ ಲಿಂಗರಾಜ ಕಾಲೇಜಿನಲ್ಲಿ ಪದವಿ ಶಿಕ್ಷಣ ಪೂರೈಸುತ್ತಾರೆ. ಪದವಿ ಓದುವ ಸಂದರ್ಭ (1956)ದಲ್ಲಿಯೇ 'ಅಣ್ಣ–ತಂಗಿ' ಕಾದಂಬರಿಯನ್ನು, ಪದವಿ ಮುಗಿಯುತ್ತಿದ್ದಂತೇ 'ಮುಗುಳು' (1958) ಕವನ ಸಂಕಲನವನ್ನು ಕನ್ನಡ ಎಂ.ಎ ಓದುವ ಸಂದರ್ಭ (1961)ದಲ್ಲಿ ಬೆಂಬತ್ತಿದ ಕಣ್ಣು' ಎಂಬ ಏಕಾಂಕ ನಾಟಕವನ್ನು ಬರೆದು ಶಿಕ್ಷಕರ ಪ್ರೀತಿ, ಸಮಕಾಲೀನ ಗೆಳೆಯರ ಪ್ರೀತಿಯನ್ನು ಗಳಿಸುತ್ತಾರೆ. ಗಿರಡ್ಡಿ, ಪಟ್ಟಣಶೆಟ್ಟಿ, ಚಂಪಾ ಮೊದಲಾದವರೆಲ್ಲ ಇವರ ಸಮಕಾಲೀನ ಗೆಳೆಯರಾದದ್ದು ವಿಶೇಷ. ಎಂ.ಎ. ಪಾಠದ ಗುರುಗಳು (ಸುಮತೀಂದ್ರ ನಾಡಿಗರು) ಇವರ ಏಕಾಂಕ ನಾಟಕ ಪ್ರದರ್ಶನದಲ್ಲಿ ಪಾತ್ರಧಾರಿಗಳಾದದ್ದು ಕಂಬಾರರ ಬರಹದ ಜನಪ್ರಿಯತೆಗೆ ಮತ್ತು ಮೆಚ್ಚುಗೆಗೆ ಸಾಕ್ಷಿ ಎನ್ನುವಂತಿದೆ. ಜನಪದ ಕಲಾಪ್ರಪಂಚವು ಕಂಬಾರರ ಮನವನ್ನು ಸೂರೆಗೊಂಡದ್ದರಿಂದ ಮುಂದೆ 1965ರಲ್ಲಿ ಗುರು ಭೂಸನೂರಮಠ ಅವರ ಮಾರ್ಗದರ್ಶನದಲ್ಲಿ 'ಉತ್ತರ ಕರ್ನಾಟಕದ ಜನಪದ ರಂಗಭೂಮಿ ಹುಟ್ಟು ಬೆಳವಣಿಗೆ' ಎಂಬ ವಿಷಯದ ಕುರಿತು ಅಧ್ಯಯನ ಗೈದು ಪಿಎಚ್.ಡಿ ಪದವಿ

ಗಳಿಸುತ್ತಾರೆ. 'ಸ್ನಾತಕ ಪದವಿ ಮುಗಿಯುತ್ತಿದ್ದಂತೆಯೇ ಬೆಳಗಾವಿಯ ಲಿಂಗರಾಜ ಕಾಲೇಜಿನಲ್ಲಿ ಕಂಬಾರರು ಅಧ್ಯಾಪಕ ವೃತ್ತಿಗೆ ಸೇರಿ ಪ್ರೊ ಎ. ಕೆ. ರಾಮಾನುಜನ್‌ರು ಕೈಗೆತ್ತಿಕೊಂಡಿದ್ದ 'ಜಾಗತಿಕ ಜಾನಪದ ಕತೆಗಳ ಸಮಗ್ರ ಅಧ್ಯಯನ' ಕಾರ್ಯದಲ್ಲಿ ಭಾಗಿಯಾಗುತ್ತಾರೆ. ಈ ಅಧ್ಯಯನದ ಅನುಭವ ಕಾರಣವಾಗಿ ಅವರು ಉತ್ತರ ಕರ್ನಾಟಕದ ಜನಪದ ಕಥೆಗಳನ್ನು ಸಂಪಾದಿಸಿದ್ದಿದೆ. ಇದೇ ಸಂದರ್ಭದಲ್ಲಿ (1964)ಯೇ ಅವರಿಂದ ಆಧುನಿಕ ಲಾವಣಿ ಸ್ವರೂಪದಲ್ಲಿ ಹೇಳತೇನ ಕೇಳ' ಕಾವ್ಯ ಕೃತಿ ಮೂಡಿಬಂದಿದೆ.

ಡಾ. ಕಂಬಾರರು ಲಿಂಗರಾಜ ಕಾಲೇಜು ಬಿಟ್ಟು 1964 ರಲ್ಲಿ ಸಾಗರದ ಲಾಲ್ ಬಹಾದ್ದೂರ್ ಶಾಸ್ತ್ರೀ ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿ ಕೈಕೊಂಡಾಗ ಅಲ್ಲಿ ಗೋಪಾಲಕೃಷ್ಣ ಅಡಿಗರ ಸಂಪರ್ಕ ದೊರೆಯುತ್ತದೆ. ಅವರಿಂದ ಪ್ರಭಾವಿತರಾಗಿ ನವ್ಯ ಸಾಹಿತ್ಯದ ರಚನೆಗೆ ತೊಡಗುತ್ತಾರೆ. ಆದರೆ ಕಾಲಾನಂತರದಲ್ಲಿ ಅದರಿಂದ ಭಿನ್ನತೆಯನ್ನು ಸಾಧಿಸುತ್ತಾರೆ. ಸಾಗರದಲ್ಲಿರುವ ದಿನಗಳಲ್ಲಿ ಶಾಂತವೇರಿ ಗೋಪಾಲಗೌಡರ, ಜೆ.ಎಚ್. ಪಟೇಲರ, ಎಸ್. ಬಂಗಾರಪ್ಪ ಮೊದಲಾದ ದಿಗ್ಗಜರ ಸಂಪರ್ಕ, ಗೆಳೆತನ ಸಾಧಿಸಿದ್ದು ಕಂಬಾರರ ಜೀವನದ ಅಗ್ಗಳಿಕೆ. 'ಬಣ್ಣಿಸಿ ಹಾಡವ್ವ ನನ ಬಳಗ' (1967) ಎಂಬ ತ್ರಿಪದಿಗಳ ಸಂಗ್ರಹ, ಕೀರ್ತಿನಾಥ ಕುರ್ತಕೋಟಿ ಅವರೊಂದಿಗೆ ಮೊದಲಬಾರಿಗೆ 'ಸಂಗ್ಯಾ–ಬಾಳ್ಯಾ' (1966) ನಾಟಕಗಳನ್ನು ಸಂಪಾದಿಸಿದ್ದಲ್ಲದೆ 'ಋಷ್ಯಶೃಂಗ' (1967) ನಾಟಕವನ್ನು ಇಲ್ಲಿರುವಾಗಲೇ ರಚಿಸುತ್ತಾರೆ. 1967ರಲ್ಲಿ ಉಡುಪಿಯ ಪೂರ್ಣಪ್ರಜ್ಞ ಕಾಲೇಜಿನಲ್ಲಿ, 1968 ರಿಂದ 70 ರ ವರೆಗೆ ಅಮೇರಿಕಾದ ಚಿಕಾಗೋ ವಿಶ್ವವಿದ್ಯಾಲಯದಲ್ಲಿ 1970 ರಿಂದ 91 ರ ವರೆಗೆ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ ಕಂಬಾರರು 1992 ರಿಂದ 1998 ರ ವರೆಗೆ ಹಂಪಿ ವಿಶ್ವವಿದ್ಯಾಲಯದ ಸಂಸ್ಥಾಪಕ ಕುಲಪತಿಗಳಾಗಿ ವಿಶಿಷ್ಟ ಸಾಧನೆ ಗೈಯುತ್ತಾರೆ. ಕರ್ನಾಟಕದಲ್ಲಿ ಹಂಪಿ ವಿಶ್ವ ವಿದ್ಯಾಲಯವನ್ನು ಒಂದು ಮಾದರಿ ವಿಶ್ವವಿದ್ಯಾಲಯವನ್ನಾಗಿ ರೂಪಿಸುವ ನಿಟ್ಟಿನಲ್ಲಿ ಅವರು ಗೈದ ಕಾರ್ಯ ಸಾಮಾನ್ಯವಾದುದಲ್ಲ. ಪಕ್ಷಪಾತವಾಗಿದ್ದ ಅಧ್ಯಯನದ ಸಿದ್ಧ ಮಾದರಿಗಳನ್ನೆಲ್ಲ ಮುರಿದು ಜನಪರವಾಗಿ ಅಧ್ಯಯನದ ಶಿಸ್ತುಗಳನ್ನು ರೂಪಿಸಿಕೊಡುವ ಕಾರ್ಯದಲ್ಲಿ ಕುವೆಂಪು ಅವರಂತೆ ದೂರ ದೃಷ್ಟಿ ಉಳ್ಳವರಾಗಿ, ಹಠಹಿಡಿದು ಕೆಲ ಉತ್ತಮ ವಿಚಾರಶೀಲ ಅಧ್ಯಾಪಕ ಬಳಗ, ವಿದ್ಯಾರ್ಥಿ ಬಳಗವನ್ನು ಒಂದೆಡೆ ಕರೆತಂದು ಕಾರ್ಯ ಸಾಧಿಸಿದ್ದು, ಅನ್ಯ ಅಧ್ಯಯನದ ಶಿಸ್ತುಗಳೊಂದಿಗೆ ಆಯಾಮಗಳಲ್ಲಿ ಸಂಶೋಧನೆಯ ವಿಧಾನಗಳನ್ನು ರೂಪಿಸಿದ್ದು ಶೈಕ್ಷಣಿಕ ರಂಗದಲ್ಲಿ ವಿಚಾರ ಹೊಸಮಾರ್ಗವನ್ನು ತೆರೆದಂತಾಗಿದೆ. ಇಲ್ಲಿ ಭಾವ – ಬುದ್ಧಿ ವಿಜ್ಞಾನಗಳನ್ನು ಬದುಕಿನ ಏಳಿಗೆ ಹೆಣೆಯುವ ಕಲೆಯೊಂದನ್ನು ಕಂಬಾರರು ರೂಪಿಸಿದ್ದು ಅಪರೂಪದ ಮಾದರಿ, ಹಂಪೆಯಲ್ಲಿರುವಾಗಲೇ ಚಕೋರಿ (1996) ಮಹಾಕಾವ್ಯ, ಮಹಾಮಾಯಿ (1998) ನಾಟಕಗಳನ್ನು ತುಂಬ ವಿಶಿಷ್ಟ ಧಾಟಿ, ಲಯ, ಶೈಲಿಗಳಲ್ಲಿ ರಚಿಸಿದ್ದು. ಕಂಬಾರರ ಕರ್ತೃತ್ವ ಶಕ್ತಿಗೆ ಪೂರಕ ಆಯಾಮವಾಗಿ ಹಲವು ಅಕಾಡೆಮಿಗಳ ಅಧ್ಯಕ್ಷ, ಸದಸ್ಯ ಜವಾಬ್ದಾರಿಗಳೂ ಪ್ರಸ್ತುತ ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಜವಾಬ್ದಾರಿಯೂ ಸೇರಿದೆ. ಅವರ ಸಾಹಿತ್ಯಕ ಸಾಧನೆಗೆ ಸಂದಗೌರವ ಅಪಾರವಾದುದು. ವರ್ಧಮಾನ ಪ್ರಶಸ್ತಿ, ಕೇರಳದ ಕುಮಾರನ್ ಆಶಾನ್' ಪ್ರಶಸ್ತಿ, ಕೇಂದ್ರ ಸಂಗೀತ ನೃತ್ಯ ಅಕ್ಯಾಡೆಮಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕೇಂದ್ರ, ರಾಜ್ಯ ಅಕಾಡೆಮಿ ಪ್ರಶಸ್ತಿಗಳು, ಪದ್ಮಶ್ರೀ ಪ್ರಶಸ್ತಿ, ಕಬೀರ್ ಸಮ್ಮಾನ್ ಪಂಪ, ನಾಡೋಜ, ಠಾಗೋರ್ ಪ್ರಶಸ್ತಿಗಳು 2010 ರಲ್ಲಿ ಜ್ಞಾನಪೀಠ ಪ್ರಶಸ್ತಿ ಮೊದಲಾದಲಾದವುಗಳು ವಿವರಕ್ಕೆ ಅಗತ್ಯ ಉಲ್ಲೇಖಗಳು. ಅವರ ರಂಗಭೂಮಿ ಮತ್ತು ಚಲನಚಿತ್ರ ರಂಗದ

ಸಾಧನೆಗೆ ಮೂಡಿದ ಗರಿಗಳೂ ವಿಶಿಷ್ಟವಾಗಿವೆ. 1964 ರಲ್ಲಿ ಮದುವೆಯಾದ ಕಂಬಾರರು ಪತ್ನಿ ಸತ್ಯಭಾಮೆ, ಒಬ್ಬ ಮಗ, ಮೂವರು ಹೆಣ್ಣುಮಕ್ಕಳು, ಮರಿಮಕ್ಕಳೊಂದಿಗಿನ ತುಂಬು ಪರಿವಾರ ಹೊಂದಿ ಸಧ್ಯ ಬೆಂಗಳೂರಿನ ತಮ್ಮ ಮನೆ 'ಸಿರಿ ಸಂಪಿಗೆ' ಯಲ್ಲಿ ವಿಶ್ರಾಂತರು ಎಂದರೆ ತಪ್ಪಾದೀತು! ನಾಡಿನ ತುಂಬ ದೇಶದ ತುಂಬ ಸಂಚರಿಸುವ ಅವಿಶ್ರಾಂತ ಅದಮ್ಯ ಚೇತನರೂಪಿ ಅವರು.

**ಭಾಗ – 2**

ಡಾ.ಚಂದ್ರಶೇಖರ ಕಂಬಾರ ಅವರ ಸಾಧನೆಯನ್ನು ಸಾಹಿತ್ಯಕಲಾ ಸಾಧನೆ, ರಂಗಕಲಾ ಸಾಧನೆ, (ಚಲನ)ಚಿತ್ರಕಲಾ ಸಾಧನೆ, ಸಂಗೀತಕಲಾ ಸಾಧನೆ ಎಂಬಿತ್ಯಾದಿಯಾಗಿ ಸ್ಥೂಲವಾಗಿ ವರ್ಗಿಕರಿಸಬಹುದು. ಆದರೆ ಕಂಬಾರರ ಸಾಧನೆಯ ಅನನ್ಯತೆ ಇರುವುದೇ ಇವೆಲ್ಲದರಲ್ಲಿ ಅವಿನಾಭಾವ ಸಂಬಂಧವನ್ನು ಸಾಧಿಸಿ ಜೀವನ ಕಲೆಯನ್ನು ರೂಪಿಸುವುದು. ಅರವತ್ತರ ದಶಕದಲ್ಲಿ ಸಾಹಿತ್ಯ ರಚನೆಗೆ ತೊಡಗಿದ ಕಂಬಾರರ ಬರವಣಿಗೆ ಇಂದಿಗೂ ನಿರಂತರವಾಗಿ ಸಾಗಿ ಬಂದಿದೆ.

ಮುಗುಳು, ಹೇಳತೇನ ಕೇಳ, ತಕರಾರಿನವರು, ಸಾವಿರದ ನೆರಳು, ಆಯ್ದ ಕವನಗಳು, ಬೆಳ್ಳಿ ಮೀನು, ಅಕ್ಕಕ್ಕೂ ಹಾಡುಗಳೇ, ಇದೂವರೆಗಿನ ಹೇಳತೇನ ಕೇಳ, ಎಲ್ಲಿದೆ ಶಿವಾಪುರ? – ಇವು ಕವನ ಸಂಕಲನಗಳು. ಅಣ್ಣ – ತಂಗಿ, ಕರಿಮಾಯಿ, ಸಿಂಗಾರೆವ್ವ ಮತ್ತು ಅರಮನೆ, ಜೀಕೆ ಮಾಸ್ತರ ಪ್ರಣಯ ಪ್ರಸಂಗ, ಶಿಖರ ಸೂರ್ಯ ಕಾದಂಬರಿಗಳು. ಋಷ್ಯಶೃಂಗ, ಜೈಸಿದ ನಾಯ್ಕ, ಹರಕೆಯ ಕುರಿ, ಸಾಂಬಶಿವ ಪ್ರಹಸನ, ಕಾಡುಕುದುರೆ, ನಾಯೀಕತೆ, ಬೆಪ್ಪು ತಕ್ಕಡಿ ಬೋಳೇ ಶಂಕರ, ತುಕ್ರನಕನಸು, ಜೋಕುಮಾರ ಸ್ವಾಮಿ, ಹುಲಿಯ ನೆರಳು, ಸಿರಿ ಸಂಪಿಗೆ, ಮಹಾಮಾಯಿ, ಶಿವರಾತ್ರಿ ಮೊದಲಾದವು. ಪ್ರಸಿದ್ಧ ನಾಟಕಗಳು. ಬೆಂಬತ್ತಿದ ಕಣ್ಣು, ನಾರ್ಸಿಸಸ್, ಅಪರಿಚಿತರು, ಅಂಗಿಮ್ಯಾಲಂಗಿ, ಅಸ್ತೋವ್ಯಸ್ತ, ಇದ್ದಲಿ ಮಸಿಗೆ, ಹಳವಂಡಗಳು, ಭಾರತಾಂಬೆ, ಖರೋಖರ, ಕಿಟೀಕತೆ, ಅಲಿಬಾಬಾ ಮತ್ತು ನಲ್ವತ್ತು ಕಳ್ಳರು, ಪುಷ್ಪರಾಣಿ, ಚಾಳೇಶ ಇತ್ಯಾದಿ ಏಕಾಂಕ ನಾಟಕಗಳು.

ಸಂಗ್ಯಾ–ಬಾಳ್ಯಾ, ಬಣ್ಣಿಸಿ ಹಾಡವ್ವ ನನ ಬಳಗ, ಬಯಲಾಟಗಳು, ಮಾತಾಡೋ ಲಿಂಗವೆ, ನಮ್ಮ ಜಾನಪದ, ಬಂದೀರೆ ನನ್ನ ಜಡೆಯೊಳಗೆ, ಕನ್ನಡ ನಾಟಕ ಸಂಪುಟ, ಕನ್ನಡ ಜಾನಪದ ವಿಶ್ವಕೋಶ, ಲಕ್ಷಾಪತಿ ರಾಜನ ಕಥೆ, ಬೇಡರ ಹುಡುಗ ಮತ್ತು ಗಿಳಿ, ಹದ್ದಿನ ಕಣ್ಣು, ಕಾಸಿಗೊಂದು ಸೇರು, ನೆಲದ ಮರೆಯ ನಿಧಾನ, ದೇಶೀಯ ಚಿಂತನೆ, ಮರವೇ ಮರರವೇ, ಸವದತ್ತಿ ಎಲ್ಲಮ್ಮ, ಜನಪದ ಕಥೆಗಳು, ಸಂಗ್ಯಾಬಾಳ್ಯಾ ಅನಬೇಕೊ ನಾಡೊಳಗ... ಮೊದಲಾದವು ಸಂಶೋಧನೆ, ಮತ್ತು ಸಂಪಾದಿತ ಕೃತಿಗಳು. 1996 ರಲ್ಲಿ ಮೂಡಿಬಂದ ಇಹಲೋಕ ಪರವಾದ ಶುದ್ಧ ಮತ್ತು ಮುಗ್ಧ ಆರಾಧನಾ ಭಾವವೊಂದು ಯಾವ ಕಾಲದ ಬದುಕಿಗೂ ಅಗತ್ಯವೆಂದು ಪ್ರತಿಪಾದಿಸುವ 'ಚಕೋರಿ' ಮಹಾಕಾವ್ಯ ಹೀಗೆ ಅರವತ್ತಕ್ಕೂ ಮಿಕ್ಕಿದ ಕೃತಿಗಳ ಮೂಲಕ ಕಂಬಾರರ ಸಾಹಿತ್ಯಕ ಸಾಧನೆ ಅಪಾರವಾಗಿದೆ, ಅನನ್ಯವಾಗಿದೆ.

ಕಂಬಾರರ ಕೃತಿಗಳಲ್ಲಿ – ಋಷ್ಯಶೃಂಗ, ನಾಯೀಕತೆ, ಹರಕೆಯ ಕುರಿ, ಕಾಡು ಕುದುರೆ, ಕರಿಮಾಯಿ, ಸಿಂಗಾರೆವ್ವ ಮತ್ತು ಅರಮನೆ, ಜೀಕೆ ಮಾಸ್ತರರ ಪ್ರಣಯ ಪ್ರಸಂಗ, ಸಂಗ್ಯಾ–ಬಾಳ್ಯಾ ಮೊದಲಾದ ಕೃತಿಗಳು ಚಲನಚಿತ್ರಗಳಾಗಿ ಅಪಾರ ಜನಮೆಚ್ಚುಗೆಯನ್ನು ಗಳಿಸಿದವು. ಕೆಲವು ರಾಷ್ಟ್ರಮಟ್ಟದ ಪ್ರಶಸ್ತಿಗಳನ್ನೂ ಗಳಿಸಿವೆ. ಅವರ ಅನೇಕ ನಾಟಕಗಳು, ಕಾವ್ಯ ಕೃತಿಗಳು ಹಿಂದಿಗೆ ಇಂಗ್ಲೀಷಿಗೆ ಮರಾಠಿಗೆ ಅನುವಾದಗೊಂಡಿವೆ.

ಕಂಬಾರರ ಸಾಹಿತ್ಯದ ಸೌಂದರ್ಯ, ತಾತ್ವಿಕತೆಗಳನ್ನು ಅರಿಯುವ ನಿಟ್ಟಿನಲ್ಲಿ ಆ ಮೂಲಕ ಅದಕ್ಕೆ ನ ಬೆಲೆಗಳನ್ನು ಗುರುತಿಸುವ ನಿಟ್ಟಿನಲ್ಲಿ ವಿವಿಧ ಆಯಾಮಗಳಲ್ಲಿ ಅವರ ಕೃತಿಗಳ ಅಧ್ಯಯನ ಕಾರ್ಯವೂ ಕನ್ನಡದಲ್ಲಿ ನಡೆದಿದೆ. ರಾಜ್ಯ ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿ ಹಾಗೂ ಅನೇಕ ಸಂಘ ಸಂಸ್ಥೆಗಳಿಂದ ಅವರ ಸಾಹಿತ್ಯಕ ಕೊಡುಗೆಯ ಅನನ್ಯತೆಯ ಕುರಿತು ಚಿಂತನ – ಮಂಥನ ವಿಚಾರ ಸಂಕಿರಣ ಮೊದಲಾದ ಚಟುವಟಿಕೆಗಳೂ ಜರುಗಿವೆ.

ಎಚ್. ಎಸ್. ಶಿವಪ್ರಕಾಶ, ಟಿ. ಪಿ. ಅಶೋಕ, ಬಸವರಾಜ ಮಲಶೆಟ್ಟಿ, ಡಾ. ನಾಗವೇಣಿ ಎಚ್. ಕೆ. ಸಿ. ಶಿವಾರೆಡ್ಡಿ, ಜಯಪ್ರಕಾಶ ಮಾವಿನಕುಳಿ, ವಿಕ್ರಮ ವಿಸಾಜಿ, ಸುಖದೇವ ಪಾನಬುಡೆ, ವೀರೇಶ ಬಡಿಗೇರ, ಅನಂತಮೂರ್ತಿ, ಕಲಬುರ್ಗಿ, ಕಾರ್ನಾಡ್, ಸಿ. ಎನ್. ರಾಮಚಂದ್ರ, ಜನಾ ತೇಜಶ್ರೀ, ಜಿ. ಆರ್. ತಿಪ್ಪೇಸ್ವಾಮಿ ಮೊದಲಾದ ಮಹನೀಯರು ಕಂಬಾರರ ಸಾಹಿತ್ಯ ಕೃತಿಗಳ ಕುರಿತು ವಿವೇಚನೆ, ಚಿಂತನೆ, ವಿಮರ್ಶೆ ಸಂಶೋಧನೆಗಳ ರೂಪದಲ್ಲಿ ಮೌಲಿಕ ಗ್ರಂಥಗಳನ್ನು, ಪಠ್ಯ ಪ್ರಬಂಧಗಳನ್ನು, ಲೇಖನಗಳನ್ನು ಬರೆದಿದ್ದಾರೆ. ಇತ್ತೀಚೆಗೆ ಕಂಬಾರರ 'ಸಮಗ್ರ ಕಾವ್ಯ' ಮತ್ತು 'ನೆಲಸಂಪಿಗೆ' ಹೆಸರಿನಲ್ಲಿ ಅವರ ಸಮಗ್ರ ನಾಟಕಗಳ ಸಂಪುಟಗಳು ಪ್ರಕಟಗೊಂಡಿವೆ. ಕಂಬಾರರಿಗೆ ಅರವತ್ತು ತುಂಬಿದ ಸಂದರ್ಭದಲ್ಲಿ ಅವರ ಬದುಕು – ಸಾಧನೆಗಳನ್ನು ದಾಖಲೆಗೊಳಿಸುವ ನಿಟ್ಟಿನಲ್ಲಿ ಎಚ್. ಎಸ್. ಶಿವಪ್ರಕಾಶರು 'ಸಿರಿ ಸಂಪಿಗೆ – 60' ಮತ್ತು ಅವರಿಗೆ ಜ್ಞಾನಪೀಠ ಪ್ರಶಸ್ತಿ ಬಂದ ಸಂದರ್ಭದಲ್ಲಿ ಜಯಪ್ರಕಾಶ ಮಾವಿನಕುಳಿ ಅವರು 'ಶಿಖರ ಶೇಖರ ಕಂಬಾರ' (ಶಿವಾಪುರ ಕಂಬಾರ ನಮಸ್ಕಾರ) ಎಂಬ ಬೃಹತ್ ಸ್ವರೂಪದ ಅಭಿನಂದನಾ ಗ್ರಂಥಗಳನ್ನು ಪ್ರಕಟಿಸಿ ಅವರ ಸಾಹಿತ್ಯದ ರಸ – ರುಚಿಗಳನ್ನು ನಿತ್ಯವೂ ಸಹೃದಯರು ಮೆಲುಕು ಹಾಕಿ ಅನುಭವಿಸುವಂತೆ ಮಾಡಿದ್ದಾರೆ.

ಡಾ. ಚಂದ್ರಶೇಖರ ಕಂಬಾರರು ದೇಶ–ವಿದೇಶಗಳನ್ನೂ ಸುತ್ತಾಡಿ ಗ್ರಾಮ ಜಗತ್ತಿನೊಂದಿಗೆ ಸಂಸ್ಕೃತಿಯ ಶೋಧ ನಡೆಸಿದ ಮಹನೀಯರು, ಜನಪದರ ಸಹಜ ದೇಶೀ ಭಾಷೆಯ ಸೊಗಡನ್ನು ಮತ್ತು ದೇಶೀತನಗಳನ್ನು ತಮ್ಮ ಸೃಜನರೂಪದ ಎಲ್ಲ ಕೃತಿಗಳೊಳಗೂ ಕಟ್ಟಿಕೊಟ್ಟಿದ್ದಾರೆ. ವಿಶೇಷವಾಗಿ ಉತ್ತರ ಕರ್ನಾಟಕದ ಜಾನಪದವನ್ನು ಸಮ್ಮಿಳಿಸಿಕೊಂಡು ಅವರದೇ ಶೈಲಿಯ ಅನನ್ಯತೆಯ ಛಾಪೊಂದು ಅವರ ಕಾವ್ಯದ ಸೊಗಸಾಗಿದೆ. ಅವರು ಬಳಸಿದ ಭಾಷೆ ಅನ್ಯರಿಗೆ ಅನುಕರಣೆ ಮಾಡಲು ಬಾರದು, ಶಿಷ್ಟ ಮತ್ತು ಜನಪದ ಎರಡನ್ನೂ ಮೈಗೂಡಿಸಿಕೊಂಡು ನಾದಮಯವಾಗಿ ಹೊಸರೂಪದಲ್ಲಿ ಉಕ್ಕಿದ ಹೃದ್ಯ ಭಾಷಾಶಿಲ್ಪರೂಪ ಅದು. ಇಂಥ ಪ್ರಯೋಗವನ್ನು ಉತ್ತರ ಕರ್ನಾಟಕದ ಕಡೆಗೆ ಬೇಂದ್ರೆ, ಮಧುರಚೆನ್ನರು ಮಾಡಿದ್ದಿದೆ. ಆದರೆ ಕಂಬಾರರ ಪ್ರಯೋಗಶೀಲತೆ ಅವರಿಗಿಂತಲೂ ಭಿನ್ನವಾಗಿ ನಿಂತು ಇನ್ನೂ ಸುಂದರವೆಂಬ ರೂಪವೊಂದಾಗಿ ನಿಲ್ಲುತ್ತದೆ. ಕಂಬಾರರು ಸೃಷ್ಟಿಸುವ ರೂಪಕ, ಪ್ರತಿಮೆ ಅವುಗಳಿಗೆ ಬಳಸುವ ನುಡಿಗಟ್ಟುಗಳು ಅಪ್ಪಟ ದೇಶೀತನದ ಹದದಿಂದ ಹುಟ್ಟಿದಂತಹವುಗಳು. ದೇಶೀ ಸೌಂದರ್ಯದ ಆಕೃತಿಗಳೊಂದಿಗೆ ಜಾಗತಿಕ ನೆಲೆಯ ನಾಗರಿಕ ರೂಪದ ಆಧುನಿಕ ಆಕೃತಿಗಳನ್ನು ಮುಖಾಮುಖಿಗೊಳಿಸಿ ಜೀವನ ಸೌಂದರ್ಯದ ವೈಶಿಷ್ಟ್ಯಗಳನ್ನು ಹುಡುಕುವುದು ಅವರ ಬರಹದ ಅಂತಃಸತ್ವ.

ಕಂಬಾರರ ಬಹುಪಾಲು ಕೃತಿಗಳು ಭಾರತವನ್ನೂ ಒಳಗೊಂಡು ಇನ್ನಿತರ ದೇಶಗಳ ಬದುಕಿನ ಮೇಲೆ ಉಂಟಾದ ದುಷ್ಪರಿಣಾಮಗಳನ್ನು ತೆರೆದು ತೋರಿಸುತ್ತವೆ. ವಿಶೇಷವಾಗಿ ಅವರ ನಾಟಕಗಳಲ್ಲಿ

ಸಾಂಪ್ರದಾಯಿಕ ಬದುಕು ಮತ್ತು ಆಧುನಿಕ ಜೀವನದ ನಡುವೆ ಉಂಟಾದ ಸಂಘರ್ಷಗಳ ಚಿತ್ರಣಗಳಿವೆ. ಅಂದರೆ ಸಾಂಪ್ರದಾಯಿಕ ಮತ್ತು ಆಧುನಿಕ ಜಗತ್ತಿನ ವಿದ್ಯಮಾನಗಳ ನಡುವಿನ ಬಿಕ್ಕಟ್ಟುಗಳು ಅವರ ಕೃತಿಯ ವಸ್ತುಗಳಾಗಿವೆ. ಅಲ್ಲದೆ ಗ್ರಾಮ – ನಗರಗಳ ಬದುಕಿನ ನಡುವಿನ ದ್ವಂದ್ವಗಳು, ವೈರುಧ್ಯಗಳು, ವಿಪರ್ಯಾಸಗಳು ಚಿತ್ರಿತಗೊಂಡಿವೆ. ಪ್ರೀತಿ–ಪ್ರೇಮ ಒಲವುಗಳು ಭೂಮಿಯ ಎಲ್ಲ ಜೀವಿಗಳ ಜೀವನದ ಒಳಸ್ರೋತಗಳು ಇವುಗಳಿಗೆ ಸಾಂದರ್ಭಿಕವಾಗಿ ಹುಟ್ಟಿ ಪೂರಕವಾಗುವ ಪ್ರಣಯವು ಜೀವ ಚೈತನ್ಯದ ನಿರಂತರತೆಯ ಜೊತೆಗೆ ಸೌಂದರ್ಯದ ವಿವಿಧ ಸ್ವರೂಪಕ್ಕೆ ಕಾರಣವಾಗಿದೆ. ಈ ಸೌಂದರ್ಯದಲ್ಲಿ ರೂಪ – ಕುರೂಪ ಎರಡೂ ಸೇರಿವೆ. ಇವು ಸಹ್ಯವಾಗುವ ಮತ್ತು ಅಸಹ್ಯವಾಗುವ ಕಾಲ, ಸಂದರ್ಭ, ಘಟನೆಗಳು ಬದುಕಿನಲ್ಲಿ ಸಹಜವಾಗಿಯೂ ತುಂಬ ವಿಚಿತ್ರವಾಗಿಯೂ ಘಟಿಸುತ್ತಿರುವುದೇ ಸೋಜಿಗ! ಇಂಥ ಸೋಜಿಗಗಳ ಹಿಂದಿನ ಬಹು ಸೂಕ್ಷ್ಮ ಮರ್ಮಗಳನ್ನು ಕಂಬಾರರ ಪ್ರೀತಿ – ಪ್ರೇಮದ ಕುರಿತ ಕಾವ್ಯ ಚರ್ಚಿಸುತ್ತದೆ. ಈ ಹಿನ್ನೆಲೆಯಲ್ಲಿ ಪ್ರೇಮ ಮತ್ತು ಉತ್ಕಟ ಕಾಮವನ್ನು ತಮ್ಮ ಸೃಜನಶೀಲತೆಯ ಮೂಲ ದ್ರವ್ಯವಾಗಿ ಕಂಬಾರರು ಬಳಸಿದ್ದಾರೆ.

1966ರಲ್ಲಿ ಕುರ್ತಕೋಟಿಯವರೊಂದಿಗೆ ಕೂಡಿ ಸಂಪಾದಿಸಿದ ಅವರ 'ಸಂಗ್ಯಾ – ಬಾಳ್ಯಾ' ನಾಟಕವು (ಮುಂದೆ ಇದು 1975 ರಲ್ಲಿ 'ಸಂಗ್ಯಾ–ಬಾಳ್ಯಾ ಅನಬೇಕೋ ನಾಡೊಳಗ' ಎಂಬ ಹೆಸರಿನಿಂದ ಅವರಿಂದ ಪುನಃ ಪರಿಷ್ಕರಿಸಿದ್ದಾಗಿ ವಸಾಹತುಶಾಹೀ ಸಂದರ್ಭದ ವಾಸ್ತವ ಘಟನೆಯ ಮೇಲೆ ನಿರೂಪಿತವಾದ ಕೃತಿ. ಜೀವ ಚಿರಂತನದ ಪ್ರತೀಕವಾದ ಕಾಮವು ಭೂಮಿಯ ಜೀವಿಗಳ ನೈಸರ್ಗಿಕ ಕ್ರಿಯೆಯಾಗಿರುವುದು ಸಹಜ. ಉಳಿದೆಲ್ಲ ಪ್ರಾಣಿಗಳಂತೆ ಮನುಷ್ಯನೂ ಸಮೂಹ ಜೀವಿ. ಆದರೆ ಈತ ಅರಿವುಳ್ಳ ಸಮೂಹಜೀವಿ. ಆದ್ದರಿಂದ ಈತನಿಗೆ ಸಾಮಾಜಿಕ ಕಟ್ಟುಪಾಡುಗಳು (ನೆಮ್ಮದಿಗೆ) ಅನಿವಾರ್ಯವಾಗಿವೆ. ಇಂಥ ಸಾಮಾಜಿಕ ಕಟ್ಟುಪಾಡುಗಳನ್ನು ಹರಿದೊಗೆದು ಸಹಜ ಕಾಮವು ಅಸಹಜವಾಗಿ ಅಥವಾ ಅತಿಯಾಗಿ ವಿಜೃಂಭಿಸಿದಾಗ ಅದು ಸಮೂಹದೊಳಗೆ ಅಸಹ್ಯವಾಗುತ್ತದೆ. ಅಥವಾ ಅಸಹ್ಯವೆನ್ನಿಸುವ ಹಾಗೆ ತನ್ನ ಭಾವನೆಗಳನ್ನು, ಮನಸ್ಸನ್ನು ಮನುಷ್ಯ ರೂಪಿಸಿಕೊಂಡಿದ್ದಾನೆ. ಆದ್ದರಿಂದ ಕಾಮದ ಉತ್ಕಟತೆ ಮತ್ತು ಅದು ಬಹಿರಂಗದ ಬಳಕೆಯಾಗಿ ಸಾಮಾಜಿಕ ನೀತಿ ಎಂಬ ಚೌಕಟ್ಟನ್ನು ಮುರಿದಾಗ ಉಂಟಾಗುವ ಬದುಕಿನ ವಿಷಮತೆ – ವಿರೂಪವಾದದ್ದು; ಅಸಹ್ಯವಾದದ್ದು. ಇದರ ಚಿತ್ರಣವನ್ನು ಸಂಗ್ಯಾ–ಬಾಳ್ಯಾ ನಾಟಕವು ಕಟ್ಟಿ ಕೊಡುತ್ತದೆ.

ರೂಪವತಿ ಗಂಗಾನಂಥ ಹೆಂಡತಿಗೆ ಅವಳ ತಹತಹಿಕೆಯನ್ನು ಅರಿಯದ, ಕಾಳಜಿ ಮಾಡದ, ದಾಂಪತ್ಯಪ್ರೀತಿ ತೋರದ ಈರಾನಂಥ ಗಂಡ ಇರಬಾರದು, ಸಮಯ, ಸಂದರ್ಭಗಳನ್ನು ಬಳಸಿಕೊಂಡು ಪರ ಸ್ತ್ರೀಯರನ್ನು ಮೋಹಿಸುವಂಥ ಸಂಗ್ಯಾನಂಥ ಕಾಮುಕ ಇರಬಾರದು, ಅಪ್ಪಟ ಗೆಳೆತನವನ್ನು ಸ್ವಾರ್ಥಿಯಾಗಿ ಬಲಿಕೊಡುವ ಬಾಳ್ಯಾನಂಥ ಮಿತ್ರದ್ರೋಹಿ ಇರಬಾರದು, ಸ್ವಾಭಿಮಾನವನ್ನು ಮಾರಿಕೊಂಡು ಬದುಕುವ, ಅನ್ಯರ ಬದುಕಿಗೆ ಅನೀತಿ ಮಾರ್ಗ ತೋರಿ ಕುಟಂಬವನ್ನೇ ಮುರಿಯುವ ಪರಮ್ಮನಂಥ ಕುಂಟಲಗಿತ್ತಿ ಇರಬಾರದು, ಇರಪಕ್ಷಿ, ಬಸವಂತರಂಥ ತಮ್ಮಂದಿರರಬೇಕು; ಆದರೆ ಅವರಂಥ ಅತೀ ಮುಗ್ಧರು ಅಥವಾ ಮುಗ್ಧತೆ ಇರಬಾರದು ಮತ್ತು ಬದುಕಿನಲ್ಲಿ 'ದ್ವೇಷ, ಕ್ರೌರ್ಯ'ಗಳು ಇರಲೇಬಾರದು. ಕಾಮವು ವೈಯಕ್ತಿಕವಾದದ್ದು. ಅದು ಬಹಿರಂಗದಲ್ಲಿ ಬಾಹಿರವಾದುದು. ಪರಸ್ತ್ರೀಯರ ಅಥವಾ ಮರುಷರ

ಸಂಗವು ಕೌಟುಂಬಿಕ ಸ್ವಾಸ್ಥ್ಯವನ್ನು ಹಾಳುಗೆಡಹುತ್ತದೆ ಎಂಬ ನೀತಿಯನ್ನು ಕುಟುಂಬ, ಸಮಾಜದಲ್ಲಿ ಕಟ್ಟಿಕೊಳ್ಳುವ ಬಗೆ ಹೇಗೆ ಎಂಬುದನ್ನು ಸುಗ್ಯಾಬಾಳ್ಯಾ' ನಾಟಕವು ಕಟ್ಟಿಕೊಡುತ್ತದೆ.

ಕಂಬಾರರು ಸ್ವತಃ ಪಾತ್ರಧಾರಿಗಳಾಗಿ, ಹಿಮ್ಮೇಳದವರಾಗಿ, ಮುಮ್ಮೇಳದ ನಾಯಕರಾಗಿ ನಿರಂತರ ಆಡುತ್ತ ಬಂದ 'ಶ್ರೀಕೃಷ್ಣ ಪಾರಿಜಾತ' ನಾಟಕವು ಕೂಡ ಹಾಪ್ರೇಮಗಳ ಜಗತ್ತು ಆರಂಭಿಕ ಹಂತದಲ್ಲಿ ಸಂಘರ್ಷದ ತೆರೆಗಳನ್ನು ಎಬ್ಬಿಸಿ ನಂತು ನಿಧಾನವಾಗಿ ಮಾಗುವ, ಸಂಸ್ಕಾರಗೊಳ್ಳುವ ಅವಸ್ಥೆಗಳನ್ನು ಪ್ರತಿಪಾದಿಸುತ್ತದೆ. ಲೌಕಿಕತ ಮತ್ತು ಅಲೌಕಿಕತೆಯನ್ನು ಸಮೀಕರಿಸಿ ಜನಸಾಮಾನ್ಯರನ್ನು ಅನುಭಾವದ ಉನ್ನತ ಶಿಖರಕ್ಕೆ ತಿಳಿತಿಳಿಯಾಗಿ ಎಳೆದೊಯ್ದು ಬದುಕನ್ನು ಹಗುರಗೊಳಿಸುವುದು, ನಿರುಮ್ಮಳಗೊಳಿಸುವುದು ಪಾರಿಜಾತ ನಾಟಕದ ಜೀವಾಳ. ಇದನ್ನು ಕೃಷ್ಣ – ಧಾಮ – ರುಕ್ಕಿಣಿಯರ ದಾಂಪತ್ಯ ಬದುಕಿನ ಸರಸ, ವಿರಸಗಳು ಸಮರಸದ ಹಂತಕ್ಕೆ ಬಂದು ತಲುಪುವುದರ ಕಥೆಯ ಮೂಲಕ ಬದುಕನ್ನು ತಿಳಿಗೊಳಿಸುತ್ತವೆ. ಹಗುರಗೊಳಿಸುತ್ತವೆ. ಕಂಬಾರರು ಇಂಥ ಅನೇಕ ದೊಡ್ಡಾಟ, ಸಣ್ಣಾಟಗಳಲ್ಲಿ ಆಡಿದ್ದಾರೆ. ಹಾಡಿದ್ದಾರೆ. ನಿರ್ದೇಶಕರಾಗಿ ಆಟಗಳನ್ನು ನೀಡಿದ್ದಾರೆ.

ಕಾಮವನ್ನು ಅನುಭಾವಕ್ಕೆ ತಿರುಗಿಸಿದವರಲ್ಲಿ ವಚನಕಾರರು ಎದ್ದು ಕಾಣುತ್ತಾರೆ. ಇದನ್ನು ಸರ್ವಜ್ಞನೂ ಸಾಧಿಸಿದ್ದಾನೆ. ಆದರೆ ಆಧುನಿಕರಲ್ಲಿ ತುಂಬ ವಿರಳರಿದ್ದಾರೆ. ಮಧುರಚೆನ್ನ, ಬೇಂದ್ರೆ, ಕಂಬಾರ ಮತ್ತು ತಮ್ಮ ಉತ್ತರಾರ್ಧದ ಕಾವ್ಯದಲ್ಲಿ ಕನ್ನಡದ ಅಪರೂಪದ ಕವಿ ವಿ. ಜಿ. ಭಟ್ಟರೂ ಒಬ್ಬರೆನ್ನಬಹುದು. ಕಂಬಾರರ **'ಕಾಡು ಕುದುರೆ'** – ಕಾಮದ ವಸ್ತುವೇ ಪ್ರಧಾನವಾದ ಕೃತಿ. ಆದರೆ ಅದನ್ನು ಆಕರ್ಷಣೆಯ ನೆಪವಾಗಿಟ್ಟುಕೊಂಡು ಭಾರತದಂತಹ ಬಡರಾಷ್ಟ್ರದಲ್ಲಿ ಅಭಿವೃದ್ಧಿಗೆ ಮಾರಕವಾದ, ಶೋಷಣೆಗೆ ಪೂರಕವಾದ ಊಳಿಗಮಾನ್ಯ ಪದ್ಧತಿಯ ಕರಾಳಮುಖ, ಅದರ ಅಮಾನುಷ ಮತ್ತು ಅಮಾನವೀಯ ಕುಣಿತವನ್ನು ತೆರೆದು ತೋರಿಸುತ್ತದೆ. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ತಂದುಕೊಟ್ಟ ಅವರ 'ಸಿರಿ ಸಂಪಿಗೆ' ನಾಟಕವು ಕಥಾ ನಾಯಕ ಶಿವಾನಾಗದೇವನ ಹೆಂಡತಿಯ ಮೇಲಿನ ಸಂಶಯದ ಸುತ್ತ ಹೆಣೆದ ಕಥೆಯಾಗಿದೆ.

'ಜೋಕುಮಾರ ಸ್ವಾಮಿ' ನಾಟಕದಲ್ಲಿ ನಪುಂಸಕ ಕ್ರೂರಿ ಗೌಡ ಮತ್ತು – ಬಲಶಾಲಿ ರೈತ ಬಸಣ್ಣ ಇವರ ನಡುವಿನ ತಿಕ್ಕಾಟವಿದೆ. ಸಂತಾನಕ್ಕಾಗಿ ಜೋಕುಮಾರಸ್ವಾಮಿ ದೈವದ ಮೊರೆ ಹೋಗುವ ನೆಪದಲ್ಲಿ ಕ್ರೂರಿ ಗೌಡನ ಹೆಂಡತಿ ಗೌಡ್ತಿ ತಮ್ಮ ಮನೆಯಾಳು ಮಸ್ತುಕಟ್ಟು ಮೈಯುಳ್ಳ ಬಸಣ್ಣನಿಂದ ಗರ್ಭವತಿಯಾಗುತ್ತಾಳೆ. ಆದರೆ ಊಳಿಗಮಾನ್ಯ ದರ್ಪದ ಗೌಡನ ತಂತ್ರದಿಂದ ಅವನ ಹಿಂಬಾಲಕರು ಬಸಣ್ಣನನ್ನು ಕೊಲ್ಲುತ್ತಾರೆ. **'ಸಿಂಗಾರೆವ್ವ ಮತ್ತು ಅರಮನೆ'** ಕಾದಂಬರಿಯು – ಪುರುಷ ಜಗತ್ತಿನ ಕ್ರೌರ್ಯ, ಅಬಲ, ಅತೃಪ್ತ ಸ್ತ್ರೀಯ ಮಾನಸಿಕ ತೊಳಲಾಟ, ವ್ಯವಸ್ಥೆಯೊಳಗೆ ಅವಳ ನರಳಾಟ, ಪುರುಷ ಪ್ರಧಾನ ವ್ಯವಸ್ಥೆಯ ಕುತಂತ್ರ, ಸಂಘರ್ಷ ಇತ್ಯಾದಿಯನ್ನು ಕಥಾವಸ್ತುವಾಗಿಸಿಕೊಂಡಿದೆ. **'ಜೀಕೆ ಮಾಸ್ತರರ ಪ್ರಣಯ ಪ್ರಸಂಗ'** – ಕಾದಂಬರಿಯು ಮನುಷ್ಯನ ಸಹಜ ಆಸೆ – ಆಕಾಂಕ್ಷೆಗಳನ್ನು ಅನಾವರಣಗೊಳಿಸುತ್ತ ಅವನ ಸಹಜ ಸ್ವಭಾವಗಳ ಶೋಧನೆಯ ಕಾರ್ಯ ಮಾಡುತ್ತದೆ 'ಋಷ್ಯಶೃಂಗ' ನಾಟಕವು ಬಾಳಗೊಂಡ ಎಂಬ ನಾಯಕನ ಪಾತ್ರದ ಮೂಲಕ ಆತ್ಮಶೋಧದ ಹಾದಿಗೆ ನಮ್ಮನ್ನು ಎಚ್ಚರಿಸಿ ಅಂತರ್ಮುಖಿ ಚಿಂತನೆಗೆ ದಾರಿ ಮಾಡಿಕೊಡುತ್ತದೆ.

'ಜೈಸಿದ ನಾಯ್ಕ', 'ಹರಕೆಯ ಕುರಿ', 'ಸಾಂಬಶಿವ ಪ್ರಹಸನ' ನಾಟಕಗಳು ಕಥಾ ವಸ್ತುವಿನ ದೃಷ್ಟಿಯಿಂದ ಒಂದಕ್ಕೊಂದು ಪೂರಕವೆಂಬಂತೆ ನಿರೂಪಿತವಾಗಿವೆ. ಶಿವಾಪುರದ ದೇಸಾಯಿಯ ದರ್ಬಾರಿನೊಂದಿಗೆ ಜೈಸಿದ ನಾಯ್ಕದಲ್ಲಿ ಸ್ವಾತಂತ್ರ್ಯೋತ್ತರ ಭಾರತದ ರಾಜಕೀಯ ಸ್ಥಿತಿಗತಿಗಳನ್ನು, 'ಹರಕೆಯ ಕುರಿ' ಯಲ್ಲಿ ರಾಜಕೀಯ ಅಮಾನವೀಯ ಕ್ರೌರ್ಯ ದಬ್ಬಾಳಿಕೆ ಮತ್ತು ಅದಕ್ಕೆ ಬಲಿಯಾಗುವ ಬದುಕಿನ ತಲ್ಲಣ, ತಳಮಳ ನೋವಿನ ಪರಿತಾಪದ ತಣ್ಣನೆಯ ವಿಷಾದ ಭಾವಗಳನ್ನು ಕಲಾತ್ಮಕವಾಗಿ ಕಟ್ಟಿಕೊಡುತ್ತಾರೆ ಕಂಬಾರರು. ಸಾಂಬಶಿವ ಪ್ರಹಸನವೂ ಕ್ರೂರ ರಾಜಕೀಯ ಹೂರಣವನ್ನೇ ಒಳಗೊಂಡಿದೆ.

'ನಾಯೀಕತೆ' – ನಾಟಕವು ದಾಸ್ಯದ ಪರಮಾವಧಿಯನ್ನು ವಿವರಿಸಿದರೆ 'ಬೆಪ್ಪು ತಕ್ಕಡಿ ಬೋಳೇಶಂಕರ' – ನಾಟಕವು ಸಮಾನತೆ, ಸಮಾಜವಾದದ ಪ್ರತಿಪಾದನೆಯೊಂದಿಗೆ ಶ್ರಮ ಸಂಸ್ಕೃತಿಯ ಸಂಕಷ್ಟ ಮತ್ತು ಅದರ ಸಂಯಮ, ಸಮಾಧಾನಗಳನ್ನು ಹಾಗೆಯೇ 'ತುಕ್ರನ ಕನಸು' ನಾಟಕ ಸಮಾನತೆಯ ಆಶಯಗಳನ್ನು ಪ್ರತಿಪಾದಿಸುತ್ತವೆ. 'ಕರಿಮಾಯಿ' ಕಾದಂಬರಿ ಮತ್ತು 'ಮಹಾಮಾಯಿ' ನಾಟಕಗಳು ದೇಶೀಯ ಅನನ್ಯತೆಗಳನ್ನು ಅನಾವರಣಗೊಳಿಸಿವೆ. ಕರಿಮಾಯಿಯಲ್ಲಿ ಪರಂಪರೆ ಮತ್ತು ಆಧುನಿಕತೆಯ ನಡುವಿನ ಸಂಘರ್ಷ ಮುಖಾ–ಮುಖಿಯಾಗಿ ನಿಂತಿದೆ. ಶಿವಾಪುರದ ಹಳ್ಳಿಯಿಂದ ದೇಶೀ ಅನನ್ಯತೆಗಳನ್ನು ಹಿಡಿಯುವ ತಂತ್ರವಿದೆ. ಮಹಾಮಾಯಿಯಲ್ಲಿ ದೇಶೀ ದೇವಿ ಶೆಟವಿ ತಾಯಿಯ ಸುತ್ತ ಹೆಣೆದ ಬದುಕಿನ ಕಥೆ ಇದೆ.

ಕನಸುಗಳ ಮೂಲಕ ಕಥೆ ಹೇಳಿಸುವ, ಹೊಸಭಾಷಾ ತಂತ್ರನಾವೀಣ್ಯತೆಯನ್ನು ಸಾಧಿಸಿದ ಮಹಾಕಾವ್ಯ 'ಚಕೋರಿ' ಬಲ ಮತ್ತು ಶಕ್ತಿಗಳ ನಡುವಿನ ಹೋರಾಟದ ಕಥಾನಕ ಇದು. ಬಹು ಸೂಕ್ಷ್ಮವಾಗಿ ಮನುಷ್ಯ ಬದುಕಿನ ಸೂರ ಸಂಸ್ಕೃತಿ, ಚಂದ್ರ ಸಂಸ್ಕೃತಿಗಳ ವೈಶಿಷ್ಟ್ಯಗಳನ್ನು ವಿವರಿಸುತ್ತದೆ. ಅವುಗಳ ನಡುವಿನ ನಿರಂತರ ಅಂತರ ಸಂಘರ್ಷಗಳನ್ನು ತೆರೆದಿಡುತ್ತದೆ. ಚಕೋರಿಯಲ್ಲಿ ಬರುವ ಚಂದಮುತ್ತ ಈ ಕಾವ್ಯದ ಮುಗ್ಧ ನಾಯಕ, ಬಲ ಮತ್ತು ಅಧಿಕಾರ ರೂಪದ ಸೂರ ಮುತ್ತನನ್ನು ಆತ ಎದುರಿಸಿ ನಿಲ್ಲುವ ಸಂಘರ್ಷದ ಚಿತ್ರಣ ಕಥೆಯ ಹೂರಣವಾಗಿದೆ. ಬದುಕಿನಲ್ಲಿ ದ್ವಂದ್ವಗಳನ್ನು ಎದುರಿಸುತ್ತಲೇ ಅಪರಿಮಿತ ಸಂಯಮದಿಂದ ಹೊಸ ದೃಷ್ಟಿ ತಳೆದು ಕಲೆಯ ಮೂಲಕ ಬಾಳಿನ ಅಖಂಡತ್ವವನ್ನು ಕಾಣುವ, ಅನುಭವಿಸುವ ಸಾಧ್ಯತೆಯನ್ನು ತೋರಿಸುವ ಅಸಾಧಾರಣ ಕಲ್ಪನೆಯ ಕೃತಿ ಚಕೋರಿ.

ಅನ್ಯ ಪರಂಪರೆ ಮತ್ತು ಸಾಂಸ್ಕೃತಿಕ ದಾಳಿಗಳನ್ನು ಅವು ಎಷ್ಟೇ ಪ್ರಭಾವಯುತವಾಗಿರಲಿ ಎದುರಿಸಿ ನಿಲ್ಲುವ ಶಕ್ತಿಯನ್ನು ತನ್ನೊಡಲಿನಿಂದಲೇ ಕಟ್ಟಿಕೊಳ್ಳುವ ಯುಕ್ತಿ ದೇಶೀತನಕ್ಕೆ ಸಹಜವಾಗಿದೆ ಎಂಬ ಸತ್ಯವನ್ನು 'ಶಿಖರ ಸೂರ್ಯ' ಮಹಾ ಕಾದಂಬರಿ ಸಾರುತ್ತದೆ. ಆಧುನಿಕ ಕಾಲದಲ್ಲೂ ಎರಗಿಬಂದು ಅಪ್ಪಳಿಸುತ್ತಿರುವ ವಸಾಹತುಶಾಹಿ ನಿಲುವಿನ ಅನೇಕ ಸಮಸ್ಯೆಗಳಿಗೆ ನಮ್ಮ ದೇಶೀಯ ನೆಲೆಗಟ್ಟು ಕಾಲಕ್ಕೆ ತಕ್ಕಂತೆ ತಕ್ಕ ಉತ್ತರಗಳನ್ನು ನೀಡಬಲ್ಲ ಶಕ್ತಿ–ಯುಕ್ತಿಗಳನ್ನು ಸಹಜವಾಗಿ ಹೊಂದಿದೆ ಎಂಬುದನ್ನು ಶಿಖರ ಸೂರ್ಯದಲ್ಲಿ ಕಂಬಾರರು ದರ್ಶನ ರೂಪದಲ್ಲಿ ನಿರೂಪಿಸುತ್ತಾರೆ. ಈ ನೆಲೆಯಲ್ಲಿ ಅವರ ಶಿಖರ ಸೂರ ಕೃತಿಯೂ ಕೂಡಾ ಮಹಾ ಕಾವ್ಯದ ಸ್ವರೂಪವನ್ನೇ ಪಡೆದಿದೆ.

ಕಂಬಾರರ ಸಂಶೋಧನೆ ಮತ್ತು ಸಂಪಾದಿತ ಕೃತಿಗಳ ಸಂಖ್ಯೆಯೂ ದೊಡ್ಡದು. ಅದು ಸತ್ವದಿಂದಲೂ ಕೂಡ ಅಷ್ಟೇ ಹೂರಣಪೂರಿತವು, ಜನಪದ ಹಾಡು, ತ್ರಿಪದಿ, ಲಾವಣಿ, ನಾಟಕಗಳ ಕುರಿತ ಸಂಪಾದಿತ ಕೃತಿಗಳು ಮೂಲ ಜಾನಪದ ಸಾಹಿತ್ಯ ಮತ್ತು ಕಲಾ ಸಂಪ್ರದಾಯಗಳನ್ನು ಅವುಗಳ ಪರಂಪರೆಯನ್ನು

ಉಳಿಸುವ ನಿಟ್ಟಿನಲ್ಲಿ ಯಥಾವತ್ತಾದ ರೂಪದಲ್ಲಿ ಸಂಪಾದಿಸಿದವುಗಳಾಗಿವೆ. ಉತ್ತರ ಕರ್ನಾಟಕದ ಜನಪದ ರಂಗಭೂಮಿಯನ್ನು ಕುರಿತು ಅವರ ಸಂಶೋಧನೆ, ಲೇಖನಗಳು, ವೈಶಿಷ್ಟ್ಯ, ಸ್ವರೂಪ, ತತ್ವ, ಮಹತ್ವಗಳ ಹಿನ್ನೆಲೆಯಲ್ಲಿ ಅತ್ಯಂತ ವಿಶಿಷ್ಟ ಚಿಂತನೆಯನ್ನು ರೂಪಿಸಿವೆ ಮತ್ತು ಅನೇಕ ವಿವರಣೆಗಳನ್ನು ದಾಖಲೆ ಎಂಬಂತೆ ನೀಡಿವೆ.

ಚಂದ್ರಶೇಖರ ಕಂಬಾರರು ತಮ್ಮ ಕಾವ್ಯದ ಹೆಜ್ಜೆಗಳನ್ನು ಕನ್ನಡದ ಸಿದ್ಧ ಮಾದರಿಗಳಲ್ಲಿ ಇಟ್ಟು ನಡೆದವರಲ್ಲ. ಅವರ ಆರಂಭದ 'ಮುಗಳು' ಒಂದನ್ನು ಹೊರತುಪಡಿಸಿದರೆ ಎರಡನೆಯ ಕಾವ್ಯ ಸಂಕಲನದಿಂದ 'ಹೇಳತೇನ ಕೇಳ' ಎಂದು ಹೊಸ ಮಾದರಿಯಲ್ಲೇ ಹೇಳಲು ಆರಂಭಿಸಿದವರು. ಇಂದಿಗೂ ಭಿನ್ನ ಧಾಟಿ ಲಯನಾದಗಳನ್ನು ತಮ್ಮದೇ ಆದ 'ಕಾವ್ಯ ಮಾರ್ಗವೊಂದನ್ನು ಸೃಷ್ಟಿಸಿಕೊಂಡಿದ್ದಾರೆ. ಇಂಥ ಅನನ್ಯ ದೇಶೀ ಮಾರ್ಗದ ಕಾವ್ಯವನ್ನು ಸುಲಭವಾಗಿ ಅರಗಿಸಿಕೊಳ್ಳಲಾರದ ನವ್ಯರು, ಬಂಡಾಯದವರು ಕಂಬಾರರ ಕಾವ್ಯಕ್ಕೆ ತಕ್ಕ ವಿಮರ್ಶೆಯನ್ನು ನೀಡದೇ ಹೋದದ್ದು ವಿಪರ್ಯಾಸ. ಆದರೆ ಕುರ್ತಕೋಟಿ, ಡಿ. ಆರ್. ನಾಗರಾಜ, ಕಿ. ರಂ. ನಾಗರಾಜ, ಲಂಕೇಶ, ಶಿವಪ್ರಕಾಶ, ಟಿ. ಪಿ. ಅಶೋಕರು ಸಮಕಾಲೀನ ಸಂದರ್ಭದಲ್ಲಿ ಕಂಬಾರರ ಕಾವ್ಯಕ್ಕೆ ವಿಶಿಷ್ಟವಾಗಿ ಸ್ಪಂದಿಸಿ ಪ್ರತಿಕ್ರಿಯಿಸಿದ್ದು ಅತ್ಯಂತ ಮೌಲಿಕ ತೂಕದ್ದಾಗಿದೆ.

ಕಂಬಾರರ ಕಾವ್ಯದಲ್ಲಿ ಜಾನಪದದೊಂದಿಗೆ ಆಧುನಿಕ ಪ್ರಜ್ಞೆ ಮಿಂಚುತ್ತದೆ. ವಿಮರ್ಶೆಗೆ ಸುಲಭವಾಗಿ ಸಿಗುವ ಮಾರ್ಗ ಕಂಬಾರರದಾಗಿಲ್ಲ. ಅವರ ಭಾಷಾ ಸ್ವರೂಪ, ಸಮೃದ್ಧಿ ನುಡಿಗಟ್ಟಿನ ದೇಶೀ ಸೊಗಸು, ಗೇಯವಾದ ಮೋಡಿ ಒಮ್ಮೊಮ್ಮೆ ವಿಮರ್ಶಕರನ್ನು ದಂಗು ಬಡಿಸಿವೆ ಮತ್ತು ಅವರನ್ನು ಟೀಕಿಸಲೂ ಕಾರಣವಾಗಿವೆ. ನಾದದ ಮೋಡಿಯಲ್ಲಿ ವಾದ ಹಿಂದೆ ಸರಿದೀತು! ಎಂಬ ಆತಂಕ ವಿಮರ್ಶಕರದಾಗಿತ್ತು ಎಂಬುದಕ್ಕೆ ಸಾಕಷ್ಟು ಪುರಾವೆಗಳು ಇವೆ. ಕಂಬಾರರ ಕಾವ್ಯದಲ್ಲಿ ಬಡ – ಮಧ್ಯಮವರ್ಗದವರ ಜೀನವದ ತೊಳಲಾಟಗಳು, ಶ್ರೀಮಂತರ ದರ್ಪ ದೌರ್ಜನ್ಯಗಳು, ಆಧುನಿಕ ಜಗತ್ತಿನ ಮುಕ್ತ ಜೀವನ ಶೈಲಿಯ ವಿಪರ್ಯಾಸಗಳು, ಬಂಡವಾಳಶಾಹಿ ಜಗತ್ತಿನ ಹಿತಾಸಕ್ತಿಯ ಹಿಡಿತಗಳು, ನಾಗರಿಕ ಜಗತ್ತಿನ ಮುಖವಾಡಗಳು, ಜಾಗತೀಕರಣದ ಪ್ರಭಾವಗಳು, ಸ್ವಾತಂತ್ರೋತ್ತರ ಭಾರತದ ಅರಾಜಕ ಸ್ಥಿತಿ–ಗತಿಗಳು ಜೀವನದ ಸಹಜ ಒಲವು ಪ್ರೀತಿ – ಪ್ರೇಮ ಕಾಮಗಳು, ಅಪರಿಮಿತ ಅಪೇಕ್ಷೆಗಳು, ಹೀಗೆ ಅನೇಕ ವಿಷಯ ಸಂಗತಿಗಳು ಚಿಂತನೆಗೆ ಒಳಗಾಗಿವೆ.

ಕಂಬಾರರ ಮೇಲೆ ದೇಶೀಯ ವಚನಕಾರರು, ಸೂಫಿಗಳು, ಸಂತರು, ತತ್ವಪದಕಾರರು ಅನುಭಾವಿಗಳು ಪ್ರಭಾವ ಬೀರಿದ್ದಾರೆ. ಜಾನಪದದ ಪ್ರಭಾವವಂತೂ ಅವರ ಮೈ–ಮನ ತುಂಬಿ ನಿಂತಿದೆ. ಸ್ವತಃ ನಟರು, ನಾಟಕಕಾರರು, ನಿರ್ದೇಶಕರು, ಗಾಯಕರು, ಸಂಗೀತಗಾರರು, ಕವಿಗಳು ಆದ ಕಂಬಾರರು ತಮ್ಮೆಲ್ಲ ಕೃತಿಗಳ ಮೈಯೊಳಗೆ, ವಿಶೇಷವಾಗಿ ಕಾವ್ಯದ ಮೈಯೊಳಗೆ ತುಂಬಿ ಕುಣಿಯುತ್ತ ಆಟವಾಡಿದಂತೆ ಭಾಸವಾಗುತ್ತದೆ. ತನ್ನದೇ ಕೃತಿಯೊಳಗೆ ಮೂಡಿ ನಿಲ್ಲುವ ಇಷ್ಟು ಸಶಕ್ತ ಲೇಖಕ ಕನ್ನಡದಲ್ಲಿ ವಿರಳ ಎಂಬಂತೆ ಡಾ. ಕಂಬಾರರು ಇದ್ದಾರೆ.

**ಪರಾಮರ್ಶನ ಗ್ರಂಥಗಳು**


- ಚಂದ್ರಶೇಖರ ಕಂಬಾರ. (2018). *ಚಂದ್ರಶೇಖರ ಕಂಬಾರ ಸಮಗ್ರ ಕಾವ್ಯ*. ಸಪ್ನ ಬುಕ್ ಹೌಸ್.

- ಚಂದ್ರಶೇಖರ ಕಂಬಾರ. (2017). *ಹರಕೆಯ ಕುರಿ ಮತ್ತು ಅಂಗೀ ಮ್ಯಾಲಂಗಿ.* ಸಪ್ನ ಬುಕ್ ಹೌಸ್.
- ಚಂದ್ರಶೇಖರ ಕಂಬಾರ. (2007). *ಶಿಖರ ಸೂರ್ಯ.* ಸಪ್ನ ಬುಕ್ ಹೌಸ್.
- ಚಂದ್ರಶೇಖರ ಕಂಬಾರ. (2006). *ಚಂದ್ರಶೇಖರ ಕಂಬಾರ ಅವರ ಆಯ್ದ ಕವಿತೆಗಳು.* ಅಕ್ಷರ ಪ್ರಕಾಶನ.
- ಚಂದ್ರಶೇಖರ ಕಂಬಾರ. (1996). *ಚಕೋರಿ.* ಅಂಕಿತ ಪುಸ್ತಕ
- ಚಂದ್ರಶೇಖರ ಕಂಬಾರ. (1991). *ಬೆಪ್ಪು ತಕ್ಕಡಿ ಬೋಳೇಶಂಕರ.* ಅಂಕಿತ ಪುಸ್ತಕ
- ಚಂದ್ರಶೇಖರ ಕಂಬಾರ. (1991). *ಸಿರಿ ಸಂಪಿಗೆ.*
- ಚಂದ್ರಶೇಖರ ಕಂಬಾರ. (1975). *ಸಂಗ್ಯಾಬಾಳ್ಯ ಅನಬೇಕೊ ನಾಡೊಳಗ.*
- ಚಂದ್ರಶೇಖರ ಕಂಬಾರ. (1964). *ಹೇಳತೇನ ಕೇಳ.*